## 1

ಎರಡೂ ಬದಿಗೆ ಮುಳ್ಳು ಹಿಂಡು, ಪೊದೆ ಬೆಳೆದ ಗುಡ್ಡಗಳು. ಒಂದು ಗುಡ್ಡದ ತಪ್ಪಲಿನ ತುಸು ಜಾಗದ ಧರೆ ಕತ್ತರಿಸಿ ಸಪಾಟು ಮಾಡಲಾಗಿತ್ತು. ಅಲ್ಲಿತ್ತು ಆ ಮನೆ. ಒಂದು ರೀತಿಯಲ್ಲಿ ಇದನ್ನು ಧರೆಯ ಮೇಲಿನ ಮನೆ ಎನ್ನಬಹುದು. ಅಂಗಳದಲ್ಲಿ ನಿಂತರೆ ಬೆಳಿಗ್ಗೆ ಸೂರ್ಯ ಅಡಿಕೆ ಮರಗಳ ಚಂಡೆಯ ಮೇಲೆ ನಡೆದು ಬರುವುದು ಕಾಣುತ್ತದೆ. ಆದರೆ ಮುಳುಗಿದ್ದು ಕಾಣಲು ಧರೆ ಅಡ್ಡ ಬರುತ್ತದೆ. ಎದುರು ತೆಂಗು, ಅಡಿಕೆ ಮರದ ಚಂಡೆಗಳು ಕೈಗೆ ಸಿಗುವಂತಿದ್ದವು. ಗುಡ್ಡದ ಮೇಲಿಂದ ನೋಡಿದರೆ, ಮನೆ, ಕೊಟ್ಟಿಗೆ, ಗೊಬ್ಬರ ಕುಳಿ ಎಲ್ಲ ಚಂದವಾಗಿ ಕಾಣುತ್ತದೆ. ಕೆಳಗೆ, ಹತ್ತಿರ ಹೋದರೆ ಅಲ್ಲಿಯ ಪರಿಮಳ ವಾಸನೆ ಎಲ್ಲ ಮೂಗಿಗೆ ಬಡಿಯುತ್ತದೆ.

ಆ ಮನೆಯ ಯಜಮಾನ ಗಣೇಶ ಹೆಗಡೆಯವರ ಉಳಿದ ಹಾಟಾವಳಿಯ ಜೊತೆ ರಾಜಕೀಯವೂ ಒಂದಾಗಿತ್ತು. ಕಳೆದ ಹಲವಾರು ವರ್ಷದಿಂದ ಅದೇ ಜೋರಾಗಿತ್ತು. ಅವರು ರಾಷ್ಟ್ರೀಯ ಪಕ್ಷವೊಂದರ ಕಟ್ಟಾ ಬೆಂಬಲಿಗ. ಆ ಪಕ್ಷದಿಂದ ಸಣ್ಣ ಪುಟ್ಟ ಅಧಿಕಾರವೂ ಸಿಕ್ಕಿತ್ತು. ಅಧಿಕಾರ ಎಂದರೆ, ಮಂತ್ರಿಗಳು ಶಾಸಕರ ಪರಿಚಯವಾಗಿತ್ತು; ಅವರ ಮೂಲಕ ತಾಲ್ಲೂಕು ಆಫೀಸು, ಪೊಲೀಸ್ ಸ್ಟೇಷನ್‌ಗೆ ಹೋದರೆ ಅಧಿಕಾರಿಗಳು ಮಾತು ಕೇಳುತ್ತಿದ್ದರು. ಈ ಅಧಿಕಾರದ ಶಕ್ತಿ, ಅದರಿಂದಾದ ಜನ ಬೆಂಬಲ ಒಂದು ನಮುನಿ ಅಮಲಿನಂತೆ ಅವರನ್ನು ಆವರಿಸಿತ್ತು. ಆದರೆ ಅದರಿಂದ ದುಡ್ಡನ್ನೇನು ಮಾಡಿರಲಿಲ್ಲ. ಮೊದಮೊದಲು ಆ ಅಧಿಕಾರವನ್ನು ಊರು, ಜನರ ಸಮಸ್ಯೆ ಬಗೆಹರಿಸಲು ಬಳಸಿದರು. ಆಗಲೇ ಅವರನ್ನು ಹಳ್ಳ ಹಿಡಿಸುವ ಜನಗಳೂ ಸುತ್ತಿಕೊಳ್ಳತೊಡಗಿದ್ದರು. ಅವರ ಬೋ ಪರಾಕಿನಲ್ಲಿ ನಿಂತ ನೆಲವೇ ಮರೆತಂತಾಗಿತ್ತು. ಚುನಾವಣೆ ಬಂತೆಂದರೆ ಊಟ ಆಸರಿ ಲೆಕ್ಕಿಸದೇ ತಿಂಗಳಗಟ್ಟಲೆ ಪ್ರಚಾರ. ಹೀಗೆ ಮುಂದುವರಿಯುತ್ತಾ ಬಂದು, ಜಿಲ್ಲಾ ಪಂಚಾಯ್ತಿ ಚುನಾವಣೆಗೆ ಪಕ್ಷದಿಂದ ನಿಲ್ಲಲು ಬಯಸಿದರು. ಆದರೆ ಅವರು ಜನಪ್ರಿಯರಾಗಿರುವ ಕ್ಷೇತ್ರ ಮಹಿಳೆಯರಿಗೆ ಮೀಸಲಾಗಿತ್ತು. ಹೀಗಾಗಿ ಪಕ್ಕದ ಕ್ಷೇತ್ರದಲ್ಲಿ ನಿಲ್ಲಬೇಕಾಗಿತ್ತು. ಅಲ್ಲಿ ಅವರಿಗೆ ಟಿಕೇಟು ಕೊಡಲಿಲ್ಲ. ಸಿಟ್ಟು ಬಂದು ಸ್ವತಂತ್ರವಾಗಿ ಸ್ಪರ್ಧಿಸಿದರು. ಬಹಳ ಹಿಂದೆ ಹೀಗೇ ತಾಲ್ಲೂಕು ಪಂಚಾಯ್ತಿ ಚುನಾವಣೆಗೆ ನಿಂತು ಆರಿಸಿ ಬಂದಿದ್ದರು. ಅದು ಅವರ ಊರಿನ ಸನಿಹದ ಕ್ಷೇತ್ರವಾಗಿತ್ತು. ಆದರೆ ಈ ಸಲ ಜನರು ಅವರ ಕೈ ಹಿಡಿಯಲಿಲ್ಲ. ಸೋತದ್ದು ಮಾತ್ರವಲ್ಲ, ಇಡಗಂಟೂ ಜಪ್ತಾಯಿತು. ಒಂದೆಡೆ ಕಂಡಾಪಟ್ಟೆ ದುಡ್ಡು ಖರ್ಚಾದುದರ ಜೊತೆಗೆ ಹೀನಾಯ ಸೋಲು. ಹುಳು ಹಿಡಿದ ಮನೆಯ ಪರಿಸ್ಥಿತಿ ಹರಿದು ಬೀಳಲು ಮತ್ತೇನೂ ಬೇಕಾಗಿರಲಿಲ್ಲ.

ಬಿರುಕಿನಿಂದ ಹನಿ ಹನಿ ಹೊರಬರತೊಡಗಿದರೆ ಅದು ಯಾವಾಗಲಾದರೂ ಒಮ್ಮೆ ಒಡೆದು ಹೊರ ಬರಲೇಬೇಕು. ಹಿಂದಿನ ಚುನಾವಣೆ ಮುಗಿದ ಮೇಲೆ ಒಂಚೂರು ಜೋರಾಗಿತ್ತು. ಆಗ ಚಿಗುರೀತು, ಈಗ ಚಿಗುರೀತು ಎನ್ನುವ ನುಸಿ ಕಚ್ಚಿದ ನೋವಿನಂತಹ ಸಣ್ಣ ಆಸೆಯಿತ್ತು. ಅವೆಲ್ಲ ಗಣೇಶ ಹೆಗಡೆಯವರು ಚುನಾವಣೆಯಲ್ಲಿ ಸೋತ ಮೇಲೆ ರಪ್ಪನೆ ಕೆಳಗೆ ಬಿತ್ತು.

ಮೊದಲಿನಿಂದ ಸಾಲದ ಕೋಲು ಹಿಡಿದುಕೊಂಡೇ ಬಂದಿದ್ದರೂ ಅವರಿಗೊಂದು ಕನಸಿತ್ತು. ಹೊಸದಾಗಿ ತೋಟ ಮಾಡುವಾಗ ಅವರೇ ಹೇಳುತ್ತಿದ್ದರು: 'ಆ ತೆಂಗಿನ ಗಿಡ ದೊಡ್ಡದಾದ ಮೇಲೆ ಏನಿಲ್ಲವೆಂದರೂ ಹತ್ತು ಸಾವಿರ ಕಾಯಾಗುತ್ತದೆ, ಒಂದೊಂದೂ ಕಾಯಿಗೆ ಐದು ರೂಪಾಯಿ ಅಂದರೂ ಐವತ್ತು ಸಾವಿರ ರೂಪಾಯಿ ಆಗುತ್ತದೆ. ಇದು ಬರೀ ತೆಂಗಿನ ಮರವೊಂದರಿಂದಲೇ. ಇನ್ನು ಅಡಿಕೆ, ಗೇರುಗಳ ಉತ್ಪನ್ನ ಸೇರಿಸಿದರೆ... ಸಾಲವೂ ಇರುವುದಿಲ್ಲ'.